ಓ ಎಸ್ ನಂಃ 320-20
ಪಿ ಡಬ್ಲ್ಯೂ ಃ 1

ದಿಃ 10-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಕೆ ಹೆಚ್ ವಕೀಲರಿಂದ

27. ಸಾಕ್ಷಿಗೆ ಈಗ ದಿನಾಂಕಃ 11-10-2005 ರ ನೊಂದಾಯಿತ ಕ್ರಯ ಪತ್ರದ ಆರ್ ಟಿ ಐ ಮೂಲಕ ಪಡೆದ ದೃಢೀಕೃತ ನಕಲನ್ನು ತೋರಿಸಲಾಗಿ ಅದನ್ನು ತಾವು ಹಾಗೂ ತಮ್ಮ ಕುಟುಂಬದವರು ಬರೆದುಕೊಟ್ಟಿರುವುದಾಗಿ ನೋಡಿ ಒಪ್ಪಿದ್ದರಿಂದ ಕ್ರಯಪತ್ರವನ್ನು ನಿಡಿ 2 ಎಂದು ಗುರುತಿಸಲಾಯಿತು. ನಿಡಿ2 ರಲ್ಲಿ ಮಾರಾಟವಾದ ಸ್ವತ್ತು ತಿಮ್ಮಸಂದ್ರಗ್ರಾಮದ ಸರ್ವೆ ನಂ 51 ರ ಆಗಿರುತ್ತದೆ ಎಂದರೆ ನಿಜ. ನಿಡಿ1 ರ ಆಧಾರದ ಮೇರೆಗೆ ಮ್ಯುಟೇಷನ್ ಆದ ಸ್ವತ್ತನ್ನೇ ನಾನು ಹಾಗೂ ನಮ್ಮ ಕುಟುಂಬದವರು ಮತ್ತು 2 ನೇ ಪ್ರತಿವಾದಿ ಹಾಗೂ ಅವರ ಕುಟುಂಬದವರು ನಿಡಿ2 ರಂತೆ ಮಾರಾಟ ಮಾಡಿರುತ್ತೇವೆ ಎಂದರೆ ನಿಜ. ನಿಡಿ2 ರ ಮೂಲಕ 3 ಎಕರೆ 25 ಗುಂಟೆ ಜಮೀನನ್ನು ಮಾರಾಟ ಮಾಡಲಾಗಿದೆ. ನಿಡಿ2 ರ 4 ನೇ ಪುಟದಲ್ಲಿ 2 ನೇ ಸಾಕ್ಷಿದಾರರಾಗಿ ನಾನೇ ಸಹಿ ಮಾಡಿರುತ್ತೇನೆ. ನಿಡಿ2 ಕ್ಕೆ ಹನುಮಂತಯ್ಯರವರ ಹೆಂಡತಿ ಅಶ್ವತಮ್ಮರವರು ಸಹ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ನಿಜ. ನಿಡಿ2 ಕ್ಕೆ 1 ನೇ ಪ್ರತಿವಾದಿ ಹಾಗೂ ನನ್ನ ಸಹೋದರಿ ಪಕ್ಷಗಾರರು ಅಲ್ಲ ಎಂದರೆ ನಿಜ. ನಿಡಿ2 ಕ್ಕೆ 1 ನೇ ಪ್ರತಿವಾದಿ ಹಾಗೂ ನನ್ನ ಸಹೋದರಿ ಸಹಿ ಮಾಡಿರುವುದಿಲ್ಲ ಎಂದರೆ 1 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಿಡಿ2 ಕ್ಕೆ 1 ನೇ ಪ್ರತಿವಾದಿ ಹಾಗೂ ನನ್ನ ಸಹೋದರಿ ಸಹಿ ಮಾಡಿಲ್ಲ ನಿಡಿ 2 ರಲ್ಲಿರುವ ಸಹಿ 1 ನೇ ಪ್ರತಿವಾದಿಯದ್ದು ಅಲ್ಲ ಎಂದರೆ ಸರಿಯಲ್ಲ.

28. ನೇತೇನಹಳ್ಳಿಯಲ್ಲಿರುವ ದಾವಾ ಆಸ್ತಿಗಳ ಒಟ್ಟು ವಿಸ್ತೀರ್ಣ 3 ಎಕರೆ 35 ಗುಂಟೆ ಇದ್ದು, ಉಡುವೆಗೆರೆ ಗ್ರಾಮದ ದಾವಾ ಆಸ್ತಿಗಳ ಒಟ್ಟು ವಿಸ್ತೀರ್ಣ 35 ಗುಂಟೆ ಆಗಿರುತ್ತದೆ. 1 ರಿಂದ 5 ನೇ ದಾವಾ ಆಸ್ತಿಗಳ ಒಟ್ಟು ವಿಸ್ತೀರ್ಣ 3 ಎಕರೆ 30 ಗುಂಟೆ ಆಗುತ್ತದೆ ಎಂದರೆ 3 ಎಕರೆ 35 ಗುಂಟೆ ಆಗುತ್ತದೆ ಎಂದು ಹೇಳುತ್ತಾರೆ. ನಾನು ಹಾಗೂ ನನ್ನ ಸಹೋದರ ಹಾಗೂ ನಮ್ಮಗಳ ಕುಟುಂಬದವರು ನಿಡಿ2 ರಂತೆ 3 ಎಕರೆ 27 ಗುಂಟೆ ಜಮೀನನ್ನು ಮಾರಾಟ ಮಾಡಿ ಉಳಿದ ಅಮ್ಮಾಯಮ್ಮರವರ ಜಮೀನಿನ ಮೇಲೆ ಈ ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿ2 ರಲ್ಲಿ ಕ್ರಯಪತ್ರಕ್ಕೆ ಹೆಚ್ ಹನುಮಂತಪ್ಪ ಆದ ನನ್ನ ಧರ್ಮಪತ್ನಿ ಶ್ರೀಮತಿ ಅಶ್ವತಮ್ಮರವರ ಸಾಕ್ಷಿಯನ್ನು ಹಾಗೂ ಸುಶೀಲಮ್ಮ ಆದ ನನ್ನ ಯಜಮಾನರಾದ ಹೆಚ್ ಆಂಜಿನಪ್ಪರವರ ಸಾಕ್ಷಿಗಳನ್ನು ಸಹ ಹಾಕಿಸಿಕೊಟ್ಟಿರುತ್ತೇವೆ ಎಂಬುದಾಗಿ ಬರೆಯಲಾಗಿದೆ ಎಂದರೆ ನಿಜ. ನಿಡಿ2 ಕ್ಕೆ 1 ನೇ ಪ್ರತಿವಾದಿ ಒಪ್ಪಿಗೆಸಾಕ್ಷಿಯಾಗಿ ಸಹಿ ಮಾಡಿರುವ ಹಾಗೆ

ಬರೆದಿರುತ್ತಾರೋ ಇಲ್ಲವೋ ಗೊತ್ತಿಲ್ಲ. ನಿಡಿ2 ರಲ್ಲಿರುವ ಎನ್ ಹೆಚ್ ವಿಜಯಕುಮಾರ್ ರವರು ಯಾರು ಗೊತ್ತಿಲ್ಲ. ನನ್ನ ತಮ್ಮ ಹನುಮಂತಯ್ಯರವರ ಮಗ ಎನ್ ಹೆಚ್ ವಿಜಯಕುಮಾರ್ ಆಗಿರುತ್ತಾರೆ ಎಂದರೆ ಅವರನ್ನು ಕುಮಾರ್ ಎಂಬುದಾಗಿ ಕರೆಯುತ್ತಿದ್ದುದ್ದು ನನಗೆ ಗೊತ್ತಿದೆ ಎಂದು ಹೇಳುತ್ತಾರೆ. ನಿಡಿ2 ರ 1 ನೇ ಪುಟವನ್ನು ತೋರಿಸಲಾಗಿ ಅದರಲ್ಲಿರುವ ಸಹಿ ಎನ್ ಹೆಚ್ ವಿಜಯಕುಮಾರ್ ರವರದ್ದು ಆಗಿರುತ್ತದೆ ಎಂದರೆ ಇರಬಹುದು. ಸಾಕ್ಷಿಗೆ ಈಗ ನಿಡಿ2 ರ 4 ನೇ ಪುಟದಲ್ಲಿರುವ ಹೆಚ್ ಹನುಮಂತಯ್ಯರವರ ಸಹಿಯ ಕೆಳಗೆ ಹಾಕಿರುವ ಸಹಿಯನ್ನು ತೋರಿಸಲಾಗಿ ಅದು ಎನ್ ಹೆಚ್ ವಿಜಯಕುಮಾರ್ ರವರದ್ದು ಆಗಿರುತ್ತದೆ ಎಂದರೆ ನಿಜ. ಎನ್ ಹೆಚ್ ವಿಜಯಕುಮಾರ್ ರವರ ಸಹಿಯನ್ನು ಎನ್ ಹೆಚ್ ರಾಜುರವರ ಸಹಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಈಗ ಒಪ್ಪಿಕೊಂಡಿರುತ್ತೇನೆ, ಅದು ಎನ್ ಹೆಚ್ ವಿಜಯಕುಮಾರ್ ರವರ ಸಹಿ ಆಗಿರುತ್ತದೆ ಎಂದು ಹೇಳುತ್ತಾರೆ.

29. ಅಮ್ಮಾಯಮ್ಮರವರು ಯಾವ ವರ್ಷ ತೀರಿಕೊಂಡಿರುತ್ತಾರೆ ನೆನಪಿಲ್ಲ. ಸಾಕ್ಷಿಗೆ ಈಗ ಅಮ್ಮಾಯಮ್ಮರವರ ಮರಣದ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ತೋರಿಸಲಾಗಿ ಅದರಂತೆ ಅವರು ದಿನಾಂಕ 26-09-2020 ರಂದು ತೀರಿಕೊಂಡಿರುತ್ತಾರೆ ಎಂದು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ನಿಡಿ2 ಆಗುವಾಗ ಅಮ್ಮಾಯಮ್ಮರವರ ಹಾಗೂ ಅವರ ಮಕ್ಕಳು ಜೀವಂತ ಇದ್ದರು ಎಂದರೆ ನಿಜ, ಸಾಕ್ಷಿ ಮುಂದುವರೆದು ಆದರೆ 6-7 ವರ್ಷಗಳಿಂದ ಅಮ್ಮಾಯಮ್ಮರವರು ಹಾಸಿಗೆ ಹಿಡಿದಿದ್ದರು ಎಂದು ಹೇಳುತ್ತಾರೆ. ನಿಡಿ2 ಕ್ಕೆ ಅಮ್ಮಾಯಮ್ಮ ಹಾಗೂ ಅವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ. ಅಮ್ಮಾಯಮ್ಮ ಹಾಗೂ ಅವರ ಮಕ್ಕಳು ನಿಡಿ2 ನ್ನು ಪ್ರಶ್ನೆ ಮಾಡಿಲ್ಲ ಎಂದರೆ 2005 ರಲ್ಲಿ ನಾವು ಯಾವುದೇ ಕ್ರಯಪತ್ರ ಮಾಡಿಕೊಟ್ಟಿಲ್ಲ ಎಂದು ಹೇಳುತ್ತಾರೆ. ನಮ್ಮ ಭಾಗಕ್ಕೆ ಬಂದ ಜಮೀನನ್ನು ನಾವು ಮಾರಾಟ ಮಾಡಿದ್ದರಿಂದ ಅಮ್ಮಾಯಮ್ಮ ಹಾಗೂ ಅವರ ಮಕ್ಕಳು ನಿಡಿ2 ನ್ನು ಪ್ರಶ್ನೆ ಮಾಡಿಲ್ಲ ಎಂದರೆ ನಾವು ಯಾವುದೇ ಜಮೀನನ್ನು ಮಾರಾಟ ಮಾಡಿಲ್ಲ ಮತ್ತು ಅಂತಹ ಸಂದರ್ಭ ಬಂದಿಲ್ಲ ಎಂದು ಹೇಳುತ್ತಾರೆ. ನಿಡಿ2 ನ್ನು ನಾನು ಪ್ರಶ್ನೆ ಮಾಡಿಲ್ಲ. ನಿಡಿ2 ರಲ್ಲಿ ತೋರಿಸಿದ ಹನುಮಂತಯ್ಯರವರನ್ನು ಹೊರತುಪಡಿಸಿ ಉಳಿದ ಪಕ್ಷಗಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನಿಡಿ2 ರ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ನಿಡಿ2 ರಲ್ಲಿರುವ ಹನುಮಂತಯ್ಯರವರನ್ನು ಹೊರತುಪಡಿಸಿ ಉಳಿದ ಪಕ್ಷಗಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಲು ಮತ್ತು ನಿಡಿ2 ರ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರಲಿಲ್ಲ, ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿ ತಮಗೆ ಮನೆ ಕಟ್ಟಲು ಹಣ ಅವಶ್ಯಕತೆ ಇರುವುದರಿಂದ ನಿಡಿ2 ಕ್ಕೆ ನಾನು ಹಾಗೂ ನನ್ನ ಹೆಂಡತಿ ಸಹಿ ಮಾಡಬೇಕು ಮತ್ತು ನಿಡಿ2 ರ ಪೂರ್ತಿ ಹಣವನ್ನು ತಮಗೆ

ಕೊಡಬೇಕೆಂದು ಕೇಳಿದ್ದರಿಂದ ನಾವು ಸಹಿ ಮಾಡಿರುತ್ತೇವೆ ಮತ್ತು ನಿಡಿ2 ರ ಪೂರ್ತಿ ಹಣವನ್ನು 2ನೇ ಪ್ರತಿವಾದಿ ತೆಗೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ.

30. ನಿಡಿ2 ರಲ್ಲಿ ಸಾಲತೀರಿಸುವ ಉದ್ದೇಶವಾಗಿ ಹಾಗೂ ಗೃಹಕೃತ್ಯದ ವೆಚ್ಚಕ್ಕಾಗಿ ಎಂಬುದಾಗಿ ಬರೆಯಲಾಗಿದೆ ಎಂದರೆ ನಿಜ, ಸಾಕ್ಷಿ ಮುಂದುವರೆದು ಎಲ್ಲಾ ಕ್ರಯಪತ್ರಗಳಲ್ಲಿ ಅದೇ ರೀತಿಯಾಗಿ ಬರೆಯುತ್ತಾರೆ ಎಂದು ಹೇಳುತ್ತಾರೆ. ನಿಡಿ2 ರಲ್ಲಿ 2ನೇ ಪ್ರತಿವಾದಿ ನಮ್ಮನ್ನು ಸಹಿ ಮಾಡಲು ತಮಗೆ ಹಣದ ಅವಶ್ಯಕತೆ ಇರುವುದರಿಂದ ಕರೆದಿದ್ದರು ಎಂಬ ವಿಷಯವನ್ನು ಹೇಳಿರುವುದಿಲ್ಲ. ನಿಡಿ2 ಆದಾಗಿನಿಂದ 2020 ರವರೆಗೆ ನಾನು 2ನೇ ಪ್ರತಿವಾದಿಯಿಂದ ಹಣವನ್ನು ವಾಪಸ್ಸು ಕೇಳಿದ್ದೀರಾ ಎಂದರೆ ನಾನು ಕೇಳಿದ್ದು ಅದಕ್ಕೆ 2ನೇ ಪ್ರತಿವಾದಿ ಮಾಗಡಿಯ ನೇತೇನಹಳ್ಳಿ ಗ್ರಾಮದಲ್ಲಿರುವ ಜಮೀನಿನಲ್ಲಿ ಬರುವ ಭಾಗವನ್ನು ನನಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದರು. ನಾನು 2ನೇ ಪ್ರತಿವಾದಿಗೆ ಹಣವನ್ನು ಯಾವ ತಿಂಗಳು ಕೇಳಿರುತ್ತೀನಿ ನೆನಪಿಲ್ಲ. ಹಣವನ್ನು ಕೇಳಿ ನಾನು 2ನೇ ಪ್ರತಿವಾದಿಗೆ ನೋಟಿಸನ್ನು ಕೊಟ್ಟಿರುವುದಿಲ್ಲ. ನನ್ನ ತಂದೆಯ ಮೊದಲನೇ ಹೆಂಡತಿ ಮಕ್ಕಳಾದ ನಾನು ಮತ್ತು ನನ್ನ ತಮ್ಮ ನಮ್ಮ ನಮ್ಮಗಳ ಭಾಗಕ್ಕೆ ಬಂದ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.

31. ನನ್ನ ವಾದ ಪತ್ರದ 11ನೇ ಖಂಡಿಕೆಯಲ್ಲಿ 2ನೇ ಪ್ರತಿವಾದಿಗೆ ಮನೆ ಕಟ್ಟಲು ಹಣದ ಅವಶ್ಯಕತೆ ಇದ್ದಿದ್ದರಿಂದ ಅವರು ನಿಡಿ2 ಕ್ಕೆ ಸಹಿ ಮಾಡಲು ನಮ್ಮನ್ನು ಕರೆದಿದ್ದರು ಎಂದು ಹೇಳಿಲ್ಲ ಎಂದರೆ ನಿಜ. ಈ ವಿಷಯವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ನಾನು ಈ ವಿಷಯವನ್ನು ಸುಳ್ಳು ಹೇಳುತ್ತಿರುವುದರಿಂದ ನನ್ನ ವಾದ ಪತ್ರ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

32. 2ನೇ ಪ್ರತಿವಾದಿ ಸರ್ಕಾರಿ ನೌಕರಿಯಲ್ಲಿರುತ್ತಾರೆ. ಮೂಲ ಸರ್ವೆ ನಂ 76ರ ವಿಸ್ತೀರ್ಣ 2 ಎಕರೆ 35 ಗುಂಟೆ ಇರುತ್ತದೆ. ಸಾಕ್ಷಿಗೆ ಈಗ ಸರ್ವೆ ನಂ 76ರ 6 ಪಹಣಿಗಳ ಜೆರಾಕ್ಸ್ ಪ್ರತಿಗಳನ್ನು ತೋರಿಸಲಾಗಿ ಅವುಗಳು ಸರ್ವೆ ನಂಬರ್ 76ಕ್ಕೆ ಸಂಬಂದಿಸಿರುತ್ತದೆ ಎಂದು ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿಡಿ 4 ರಿಂದ 9 ಎಂದು ಗುರುತಿಸಲಾಯಿತು. ನಿಡಿ 4ರಲ್ಲಿರುವ ಎನ್ ಆಂಜಿನಪ್ಪರವರು ನನ್ನ 5ನೇ ಅಜ್ಜ ಆಗಿರುತ್ತಾರೆ. ಎನ್ ಆಂಜಿನಪ್ಪರವರ ಮಗ ರಾಮಚಂದ್ರಯ್ಯ ಎಂದರೆ ನಿಜ. ನಿಡಿ6 ರಂತೆ ಆಂಜಿನಪ್ಪರವರು ತೀರಿಕೊಂಡ ನಂತರ ಪಹಣಿ ಅವರ ಮಗ ರಾಮಚಂದ್ರಯ್ಯರವರ ಹೆಸರಿಗೆ ಬಂದಿರುತ್ತದೆ ಎಂದರೆ ನಿಜ. ಆಂಜಿನಪ್ಪರವರು ತೀರಿಕೊಳ್ಳುವ ಮೊದಲು ನನ್ನ ತಂದೆ ತೀರಿಕೊಂಡಿರುವುದಿಲ್ಲ. ಆಂಜಿನಪ್ಪರವರು ಒಟ್ಟು ಕುಟುಂಬದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಅವರು ತೀರಿಕೊಂಡ ನಂತರ ಒಟ್ಟು ಕುಟುಂಬದ ಆಸ್ತಿಗಳ ಪಹಣಿಗಳು ರಾಮಚಂದ್ರಯ್ಯರವರ ಹೆಸರಿಗೆ ಆಗಿರುತ್ತವೆ ಎಂದರೆ ನಿಜ.

33. ನನ್ನ ತಂದೆಯವರು ದಿನಾಂಕಃ 22-05-1995 ರಂದು ತೀರಿಕೊಂಡಿರುತ್ತಾರೆ. ತಿಮ್ಮಸಂದ್ರ ಗ್ರಾಮದಲ್ಲಿರುವ ಜಮೀನುಗಳ ಮೇಲೆ ಬೇರೆ ಯಾರು ದಾವೆಗಳನ್ನು ಹೂಡಿರುವುದಿಲ್ಲ, ಸಾಕ್ಷಿ ಮುಂದುವರೆದು ನನ್ನ ತಂದೆ ತಿಮ್ಮಸಂದ್ರದಲ್ಲಿ ಇದ್ದಿದ್ದರಿಂದ ತಿಮ್ಮಸಂದ್ರದಲ್ಲಿರುವ ಜಮೀನುಗಳನ್ನು ನನ್ನ ತಂದೆಯ ಹೆಸರಿಗೆ ಮಾಡಲಾಗಿತ್ತು. ತಿಮ್ಮಸಂದ್ರ ಗ್ರಾಮದಲ್ಲಿರುವ ಜಮೀನುಗಳನ್ನು ನನ್ನ ತಂದೆಗೆ ಭಾಗಕ್ಕೆಂದು ಕೊಟ್ಟಿರುವುದಿಲ್ಲ. ಅಂದರೆ ಸರ್ವೆ ನಂ 51 ರಲ್ಲಿ ನನ್ನ ಇತರ ಅಜ್ಜಂದಿರಿಗೆ ಹಾಗೂ ಅವರ ಮಕ್ಕಳಿಗೆ ಹಕ್ಕು ಇದೆಯಾ ಎಂದರೆ ರಾಮಚಂದ್ರಯ್ಯರವರು ತಮ್ಮ ಜೀವಿತಾವಧಿಯಲ್ಲಿ ಬಾಯಿ ಮಾತಿನಲ್ಲಿ ಜಮೀನುಗಳನ್ನು ಹಂಚಿಕೆ ಮಾಡಿದ್ದರು ಎಂದು ಹೇಳುತ್ತಾರೆ. ಅದರಂತೆ ತಿಮ್ಮಸಂದ್ರದಲ್ಲಿರುವ ಜಮೀನುಗಳನ್ನು ನನ್ನ ತಂದೆಗೆ ಕೊಟ್ಟು ತಹಶೀಲ್ದಾರ್ ಕಛೇರಿಯಲ್ಲಿ ಆರ್ ಆರ್ ಶಿರಸ್ತೆದಾರರ ಮುಂದೆ ಹೇಳಿಕೆ ಕೊಟ್ಟು ಖಾತೆಯನ್ನು ನನ್ನ ತಂದೆಯ ಹೆಸರಿಗೆ ಮಾಡಿಸಿರುತ್ತಾರೆ.

34. ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಮುದ್ದಹನುಮಯ್ಯರವರ ಮಗ ಆಂಜಿನಪ್ಪರವರ ಹೆಸರಿನಲ್ಲಿತ್ತು ಎಂದರೆ ನಿಜ. ನಾವು ಹೇಗೆ ಆಸ್ತಿಗಳನ್ನು ಭಾಗಮಾಡಿಸಿಕೊಳ್ಳಬೇಕಾಗಿತ್ತು ಅದೇ ರೀತಿ ನನ್ನ ಬೇರೆ ಅಜ್ಜಂದಿರು ಹಾಗೂ ಅವರ ಮಕ್ಕಳಿಗೆ ಆಸ್ತಿಗಳಲ್ಲಿ ವಿಭಾಗ ಮಾಡಿಕೊಳ್ಳಬೇಕಾಗಿತ್ತು ಎಂದರೆ ನನ್ನ ತಂದೆಗೆ ತಿಮ್ಮಸಂದ್ರ ಗ್ರಾಮದ ಜಮೀನುಗಳನ್ನು ಕೊಟ್ಟು ನಂತರ ಅವರು ಉಳಿಕೆ ಜಮೀನುಗಳಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಉಳಿದ ಅಜ್ಜಂದಿರು ಯಾವ ವರ್ಷದಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಗೊತ್ತಿಲ್ಲ. ದಿನಾಂಕಃ 10-05-1996 ರಂದು ನನ್ನನ್ನು ಒಳಗೊಂಡು ನಮ್ಮ ಕುಟುಂಬದ ಮೂಲ ಪುರುಷ ಮುದ್ದಹನುಮಯ್ಯ ಹಾಗೂ ಅವರ ವಾರಸುದಾರರು ಪಂಚಾಯ್ತಿ ಪಾರೀಖತ್ತನ್ನು ಮಾಡಿಕೊಂಡಿದ್ದೆವು ಎಂದರೆ ಗೊತ್ತಿಲ್ಲ. ನಾನು ಪಂಚಾಯ್ತಿ ಪಾರೀಖತ್ ಗೆ ಸಹಿ ಮಾಡಿಲ್ಲ. ನನ್ನ ತಂದೆ 1995 ರಲ್ಲಿ ತೀರಿಕೊಂಡ ನಂತರ ಒಟ್ಟು ಕುಟುಂಬ ಆಸ್ತಿಗಳು ಒಬ್ಬರ ಹೆಸರಿನಲ್ಲಿ ಕೇಂದ್ರೀಕೃತ ಆಗಿದ್ದರಿಂದ ಮುದ್ದಹನುಮಯ್ಯರವರ ವಾರಸುದಾರರು ದಿನಾಂಕಃ 10-05-1996 ರಂದು ಒಂದು ಪಂಚಾಯ್ತಿ ಪಾರೀಖತ್ತನ್ನು ಮಾಡಿಕೊಂಡಿರುತ್ತಾರೆ ಎಂದರೆ ನಿಜ.

35. ಸಾಕ್ಷಿಗೆ ಈಗ ದಿನಾಂಕಃ 10-05-1996 ರ ಪಂಚಾಯ್ತಿ ವಿಭಾಗ ಪತ್ರದ ಜೆರಾಕ್ಸ್ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿರುತ್ತಾರೆ. ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಬೇಕೆಂದು 2 ನೇ ಪ್ರತಿವಾದಿ ಪರ ವಕೀಲರು ಕೇಳಿಕೊಂಡಿದ್ದು, ಸದರಿ ದಾಖಲೆ ಜೆರಾಕ್ಸ್ ಪ್ರತಿಯಾಗಿದ್ದು ಮತ್ತು ಮುದ್ರಾಂಕ ಶುಲ್ಕ ಕಟ್ಟಿರುವುದಿಲ್ಲ ಆದ ಕಾರಣ ಅದನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

**2 ನೇ ಪ್ರತಿವಾದಿ ಪರ ವಕೀಲರು ನ್ಯಾಯಾಲಯದ ಆದೇಶದಂತೆ ಮುದ್ರಾಂಕ ಶುಲ್ಕ ಕಟ್ಟುವುದಾಗಿ**

ಒಪ್ಪಿದ್ದು ಆದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.